ಎಂ.ವಿ.ಸಿ. 1185/2023
ಆರ್.ಡಬ್ಲ್ಯೂ : 01

ದಿನಾಂಕ 28-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಆರ್-3 | ಚಾಲನ ಪರವಾನಿಗೆಯ ಯತಾಪ್ರಥಿ |

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿಕೆ.

**ಪಾಟೀ ಸವಾಲು - ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ನನ್ನ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂದರೆ ಸರಿ . ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ . ನಾನು ಟಿಪ್ಪರ್ ಲಾರಿಯನ್ನು ಚಲಾಯಿಸುತಿದ್ದೆ. ನಾನು ಹೆಬ್ರಿಯಿಂದ ಆಗುಂಬೆ ಕಡೆಗೆ ಹೋಗುತಿದ್ದೆ . ನಾನು ಡಿಕ್ಕಿ ಹೊಡೆದ ವಾಹನ ಆಗುಂಬೆಯಿಂದ ಹೆಬ್ರಿ ಕಡೆಗೆ ಬರುತಿತ್ತು . ನಾನು ಮೊತ್ತ ಮೊದಲು 10-15 ದೂರದಿಂದ ಸ್ಧ್ರಿ ವಾಹನವನ್ನು ನೋಡಿರುತ್ತೇನೆ . ನಾನು 5.45 ರ ಸಮಯದಲ್ಲಿ ನೋಡಿರುತ್ತೇನೆ . ನಾನು ಅತೀ ವೇಗ ಮತ್ತು ಅಜಾಗರುಕತೆಯಿಂದ ವಾಹನ ಚಲಾಯಿಸಿ ನಾನು ಎದುರಿನಿಂದ ನಿಧಾನವಾಗಿ ಬರುತಿದ್ದ ಈಚರ್ ವಾಹನಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದರ ಪರಿಣಾಮವಾಗಿ ಈಚರ್ ವಾಹನದ ಚಾಲಕ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆಎಂದು ತಿಳಿಸಿರುತ್ತಾರೆ. ನನ್ನ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುವುದರಿಂದ ನನ್ನ ಜವಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಸಲ್ಲಿಸಿರುವ ದೋಷಾರೋಪಣ ಪತ್ರ ವನ್ನು ಎಲ್ಲಿ ಕೂಡ ನಾನು ಪ್ರಶ್ನಿಸಿಲ್ಲ ಎಂದರೆ ಸರಿ . ನಾನು ಪ್ರಮಾಣ ಪತ್ರಕ್ಕೆ ಮಾಹಿತಿ ಕೊಟ್ಟಿಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.